(ಇಂದು ದಿನಾಂಕ 20-09-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ - ವಾದಿ ಪರ ಶ್ರೀ ಎಸ್.ಎಂ.ಎನ್. ವಕೀಲರಿಂದ-**

ನಾನು ಈ ಪ್ರಕರಣದಲ್ಲಿ ವಾದಿ ಇದ್ದು, ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ನಾನು ದಾವೆಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ದಿನಾಂಕ 04-06-2013 ರಂದು ಪ್ರತಿವಾದಿ ನಂ.1 ಇವರು ಪ್ರತಿವಾದಿ ನಂ. 2 ರವರ ಪರವಾಗಿ ಬರೆದುಕೊಟ್ಟ ದಾನಪತ್ರವನ್ನು ನಿ.ಪಿ.1 ಎಂದು, ದಾವಾಸ್ತಿಗೆ ಸಂಬಂಧಪಟ್ಟ ಸ.ನಂ. 465/I ರ ಪಹಣಿಪತ್ರಿಕೆಯನ್ನು ನಿ.ಪಿ.2 ಎಂದು, Form No. 19A ಇದರ ದೃಢೀಕೃತ ಪ್ರತಿಯನ್ನು ನಿ.ಪಿ.3 ಎಂದು, ಗ್ರಾಮ ಲೆಕ್ಕಾಧಿಕಾರಿಗಳು, ಕುಮಟಾ ಇವರು ನೀಡಿರುವ ವಾರಿಸುದಾರರ ಮಾಹಿತಿಯ ದೃಢೀಕೃತ ಪ್ರತಿಯನ್ನು ನಿ.ಪಿ.4 ಎಂದು, ಗ್ರಾಮ ಲೆಕ್ಕಾಧಿಕಾರಿಗಳು ಕುಮಟಾ ಇವರು ತಹಶೀಲ್ದಾರ ಕುಮಟಾ ಇವರಿಗೆ ಬರೆದುಕೊಟ್ಟ ವರದಿಯ ದೃಢೀಕೃತ ಪ್ರತಿಯನ್ನು ನಿ.ಪಿ.5 ಎಂದು, ದಾವಾಸ್ತಿಗೆ ಸಂಬಂಧಪಟ್ಟ ಸರ್ವೆ ನಂ. 465/I ಇದರ ಸರ್ವೆ ನಕಾಶೆಯ ದೃಢೀಕೃತ ಪ್ರತಿಯನ್ನು ನಿ.ಪಿ. 6 ಎಂದು, ವಾದಿಯವರ ಮೃತ ತಾಯಿಯವರ ವಂಶವೃಕ್ಷದ ದೃಢೀಕೃತ ಪ್ರತಿಯನ್ನು ನಿ.ಪಿ. 7 ಎಂದು, Form No. 21 ಇದರ ದೃಢೀಕೃತ ಪ್ರತಿಯನ್ನು ನಿ.ಪಿ. 8 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ